## ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಬೇಲೂರು.

**ಸಿಸಿಃ 883/2016**

**ಹೆಸರು** ಸಿ ಆರ್ ದೇವರಾಜು **ದಿಃ 26-08-2022**

ತಂದೆಯ **ಹೆಸರು** ರಾಜು

**ವಯಸ್ಸು** 62 ವರ್ಷ **ಪಿಡಬ್ಲ್ಯೂಃ 1**

**ಉದ್ಯೋಗ** ನಿವೃತ್ತ **ಸಿಡಬ್ಲ್ಯೂಃ 3**

**ವಾ ಸ** ಹಾಸನ **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು**

**ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ರವರಿಂದ**

ನಾನು 2011 ರಿಂದ 2021 ರವರೆಗೆ ಹಾಸನ ಅಬಕಾರಿ ಅಬಕಾರಿ ಉಪ ಆಯುಕ್ತರ ಕಚೇರಿಯಲ್ಲಿ ಅಬಕಾರಿ ಹಿರಿಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13-04-2017 ರಂದು ಅಬಕಾರಿ ನಿರೀಕ್ಷಕರಾದ ಚಾಸಾ-5 ಬೇಲೂರು ತಾಲೂಕಿನಲ್ಲಿ ಗಸ್ತು ಇದ್ದ ಸಮಯದಲ್ಲಿ ಬೆಃ9.00 ಗಂಟೆಗೆ ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಾಯಾರಿಸಿ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಹಲ್ಮಿಡಿ ಗ್ರಾಮಕ್ಕೆ ಹೋಗಿ ಇಬ್ಬರು ಪಂಚರು ಚಾಸಾ-1 ಮತ್ತು 2 ರವರನ್ನು ಕರೆದುಕೊಂಡು ಆರೋಪಿ ಮನೆಯ ಹತ್ತಿರ ಹೋಗಿ ಆರೋಪಿಗೆ ಬಂದ ವಿಷಯ ತಿಳಿಸಿ ಪಂಚರ ಸಮಕ್ಷಮ ಮನೆಯನ್ನು ಪ್ರವೇಶಿಸಿ ಮನೆಯನ್ನು ಶೋಧನೆ ಮಾಡಿದಾಗ 5 ಲೀ ಸಾಮಾರ್ಥ್ಯದ ಕ್ಯಾನ್ ನಲ್ಲಿ 5 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ, 15 ಲೀ ಸಾಮಾರ್ಥ್ಯದ 2 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ನಷ್ಟು ಬೆಲ್ಲದ ಕೊಳೆ ಇರುವುದು ಕಂಡು ಬಂತು. ಪಂಚರ ಸಮಕ್ಷಮ ರಾಸಾಯಿನಿಕ ಪರೀಕ್ಷೆಗಾಗಿ ಕಳ್ಳಭಟ್ಟಿ ಸಾರಾಯಿ 500 ಎಂ ಎಲ್ ನಷ್ಟನ್ನು ಮತ್ತು 2 ಕೊಡಗಳಿಂದ 1 ಬಾಟಲಿಯಲ್ಲಿ 500 ಎಂ ಎಲ್ ನಷ್ಟು ಬೆಲ್ಲದ ಕೊಳೆಯನ್ನು ಮಾದರಿಗಾಗಿ ತೆಗೆದು ಬಟ್ಟೆ ಸುತ್ತಿ ದಾರ ಕಟ್ಟಿ ಚೀಟಿ ಅಂಟಿಸಿ ಪಂಚರ ಸಹಿ ಪಡೆದು ಮಹಜರ್ ಕ್ರಮವನ್ನು ಬೆಃ9.10 ರಿಂದ 10.30 ಗಂಟೆಯವರೆಗೆ ಜರುಗಿಸಿರುತ್ತೇವೆ. ಮಹಜರ್ ನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ರಾಸಾಯಿನಿಕ ಪರೀಕ್ಷೆಗೆ ಮಾದರಿಗೆ ತೆಗೆದ ಬಾಟಲಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮು.ಮಾ-1 ಮತ್ತು 2 ಎಂದು ಗುರುತಿಸಲಾಯಿತು. ದಾಳಿ ಸಮಯದಲ್ಲಿ ಇದ್ದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ವ್ಯಕ್ತಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯೆಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ಎಸ್ ಜಿ ವಕೀಲರಿಂದಃ**

ನಾವು ಬೇಲೂರಿನಿಂದ ಚಿಕ್ಕಮಗಳೂರು ಹೋಗುವ ಮಾರ್ಗದಲ್ಲಿ ಹಲ್ಮಿಡಿ ಗ್ರಾಮಕ್ಕೆ ಹೋಗಿರುತ್ತೇವೆ. ಮಾಹಿತಿ ಚಾಸಾ-5 ರವರಿಗೆ ಬಂದಿರುತ್ತದೆ. ನಾವು ಡ್ರೈವರ್ ಸೇರಿ ಒಟ್ಟು 4 ಜನ

ದಾಳಿಗೆ ಹೋಗಿದ್ದೆವು. ಚಾಸಾ-1 ಕಳಾಸಪುರ ಗ್ರಾಮದವರು ಎಂದರೆ ಸರಿ. ಚಾಸಾ-1 ಮತ್ತು 2 ರವರನ್ನು ಆರೋಪಿ ಮನೆಯ 100 ಮೀ ದೂರದಲ್ಲಿ ನೇಮಕ ಮಾಡಿಕೊಂಡಿರುತ್ತೇವೆ. ಚಾಸಾ-1 ಮತ್ತು 2 ರವರನ್ನು ಎಲ್ಲಿ ಭೇಟಿ ಮಾಡಿರುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನಮಗೆ ದಾಳಿ ಮಾಡುವ ಮೊದಲು ಆರೋಪಿಯ ಮನೆ ಗೊತ್ತಿರಲಿಲ್ಲ. ಆರೋಪಿಯನ್ನು ಮನೆಯಿಂದ ನಾನು ಮತ್ತು ಚಾಸಾ-5 ರವರು ಕರೆದಿರುತ್ತೇವೆ. ಮನೆಯ ಉದ್ದ ಮತ್ತು ಅಗಲ ಅಳತೆ ಗೊತ್ತಿಲ್ಲ. ಮನೆಯ ಅಕ್ಕ ಪಕ್ಕದ ವಾಸಿಗಳ ಬಗ್ಗೆ ಹೇಳಲು ಆಗುವುದಿಲ್ಲ. ನಾನು ಮನೆಯ ಒಳಗೆ ಪ್ರವೇಶ ಮಾಡಿರುತ್ತೇನೆ. ಮನೆಯಲ್ಲಿ ಒಂದು ಹಾಲ್, ಅಡುಗೆ ಮನೆ ಮತ್ತು ಬಚ್ಚಲು ಮನೆ ಮಾತ್ರ ಇರುತ್ತದೆ.

2. ನಿಪಿ-1 ನ್ನು ಚಾಸಾ-5 ರವರು ಬರೆದಿರುತ್ತಾರೆ. ನಾವು ದಾಳಿಗೆ ಹೋದ ಸಮಯದಲ್ಲಿ ಖರೀದಿ ಮಾಡುವವರು ಯಾರು ಇರಲಿಲ್ಲ. ಕಳ್ಳಭಟ್ಟಿ ಸಾರಾಯಿಯನ್ನು ತಯಾರಿಸುವ ಉಪಕರಣಗಳನ್ನು ಮತ್ತು ಪದಾರ್ಥಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಕಳ್ಳಭಟ್ಟಿ ಸಾರಾಯಿ ಇದ್ದ ಕ್ಯಾನ್ ಮತ್ತು 2 ಕೊಡಗಳು ಯಾವ ಜಾಗದಲ್ಲಿ ನಿಪಿ-1 ರಲ್ಲಿ ಬರೆದಿರುವುದಿಲ್ಲ. ಸದರಿ ಕ್ಯಾನ್ ಮತ್ತು ಕೊಡಗಳ ಬಗ್ಗೆ ವಿಚಾರಿಸಿದಾಗ ಆರೋಪಿ ತನ್ನದು ಎಂದು ಹೇಳಿರುತ್ತಾರೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ಯಾನ್ ಮತ್ತು ಕೊಡಗಳು ಈಗ ನ್ಯಾಯಾಲಯದಲ್ಲಿ ಇರುವುದಿಲ್ಲ. ಸದರಿ ಕ್ಯಾನ್ ಮತ್ತು ಕೊಡಗಳು ಯಾವ ಬಣ್ಣದು ಎಂದು ನಿಪಿ-1 ರಲ್ಲಿ ಬರೆದಿಲ್ಲ. 2 ಕೊಡಗಳಿಂದ ಪ್ರತ್ಯೇಕವಾಗಿ ರಾಸಾಯಿನಿಕ ಪರೀಕ್ಷೆಗೆ ಮಾದರಿ ತೆಗೆಯಲು ತೊಂದರೆ ಇರಲಿಲ್ಲ. ಮಹಜರ್ ನ್ನು 9.10 ರಿಂದ 10.30 ರವರೆಗೆ ಬರೆದಿರುತ್ತೇವೆ. ಮಹಜರ್ ಬರೆದಾಗ ಪ್ರಕರಣ ದಾಖಲಾಗಿರಲಿಲ್ಲ. ಮಾದರಿ ಸೀಲಿನ ನಕಲಿನಲ್ಲಿ ನನ್ನ ಸಹಿ ಇರುವುದಿಲ್ಲ.

3. ಆರೋಪಿಗೆ ಸೇರಿದ ಮನೆಯ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಆರೋಪಿಗೂ ಮತ್ತು ಮು.ಮಾ-1 ಮತ್ತು 2 ರಲ್ಲಿ ತೆಗೆದ ಮಾದರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಹಲ್ಮಿಡಿ ಗ್ರಾಮಾದ ವಾಸಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಪಂಚರನ್ನು ಹಲ್ಮಿಡಿ ಗ್ರಾಮದಲ್ಲಿ ನೇಮಕ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕಳ್ಳಭಟ್ಟಿ ಸಾರಾಯಿ ಮತ್ತು ಬೆಲ್ಲದ ಕೊಳೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಸಾಯಿನಿಕ ಪರೀಕ್ಷೆಗೆ ಯಾವುದೇ ಸ್ಯಾಂಪಲ್ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಇಲಾಖಾ ಸಾಕ್ಷಿಯಾದ ಕಾರಣ

ಇಲಾಖಾ ಅಂಕಿ ಅಂಶಗಳಿಗೊಸ್ಕರ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**1** ನ್ನು ಕಚೇರಿಯಲ್ಲಿ ಕುಳಿತು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ**

**(ಪ್ರಸನ್ನಕುಮಾರ್ ಸಿ.)**
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ಬೇಲೂರು.**